ಆ ಮಗು ಮಣ್ಣಿನ ದೂಳನ್ನೇ ಸವಿಯುತ್ತಾ ಅಂಗಳದಲ್ಲಾಡುತ್ತಿತ್ತು. ಆಚೆ ಪಾಳು ಬಿದ್ದ ಗೋಡೆ ಬದಿ ಬಿಸಿಲಲ್ಲಿ ಅದರ ಹೆತ್ತಮ್ಮ ಏನೋ ಹಾಡುತ್ತ ಹಾಡಿನೊಂದಿಗೆ ಗಟ್ಟಿಯಾಗಿ ನಕ್ಕಾಗ ಮಗು ಮುಕ್ಕುತ್ತಿದ್ದ ಮಣ್ಣು ಬಿಟ್ಟು ಅಡ್ಡಾದಿಡ್ಡಿ ನಡೆಯುತ್ತ ತನ್ನ ಉಬ್ಬಿದ ಹೊಟ್ಟೆಯನ್ನು ಕದಿರಕಡ್ಡಿಯಂತಿದ್ದ ಕಾಲ್ಗಳಲ್ಲಿ ಅಮ್ಮನಿಗೂ ತನಗೂ ಇದ್ದ ಭೂಮಿ ಅಳತೆಯನ್ನು ಕಿರಿದು ಮಾಡುತ್ತ ಅವಳನ್ನು ಸಮೀಪಿಸುತ್ತಿತ್ತು.

ನಡುವೆಯೇ ಇದ್ದ ಚಪ್ಪಡಿಗಲ್ಲಿನ ಹಾಸೊಂದನ್ನು ಅದು ದಾಟಲಾರದೆ ಅಡ್ಡಗಾಲು ಹಾಕಿ ಮೂರುರುಳು ಕಲ್ಮಣ್ಣು ನೆಲದ ಮೇಲೆ ಉರುಳಿ ಬಿಟ್ಟಿತು. ತಾಯಿ ಓಡೋಡಿ ಬಂದಳು.

'ಅಯ್ಯೋ ರಾಮ... ಮಗು ಬಿದ್ಬಿಡ್ತು!' ಅದನ್ನೆತ್ತಿ ಸೊಂಟಕ್ಕೆರಿಸಿ ಕೈ ಬಳಸಿದಳು. ಕಣ್ಣೊರೆಸಿದಳು. ಕಲ್ಲಿನ ಚೂಪು ತರಚಿ ಮಂಡಿಗಳಲ್ಲಿ ಒಂದಿಷ್ಟು ರಕ್ತ ಕಾಣಿಸಿತು. ತನ್ನ ಹರಕು ಸೀರೆಯ ಸೆರಗಿನಿಂದ ಗಾಯವನ್ನು ಒತ್ತಿದಳು. ಬಿಂದು ಬಿಂದುವಾಗಿ ಮೆತ್ತಿಕೊಂಡಿದ್ದ ರಕ್ತ ನೋಡಿ ಅವಳೇಕೋ ಜೋರಾಗಿ ನಕ್ಕಳು. ಅವಳೆತ್ತಿಕೊಂಡರೂ ಮಗು ಮಾತ್ರ ಅಳುತ್ತಲೇ ಇತ್ತು.

ಈಗ ಗಾಯದ ರಕ್ತ ಒಸರುತ್ತಿರಲಿಲ್ಲ.

ಸಣ್ಣ ಕಲ್ಲಿನ ಹುಡಿ ಮೇಲೆ ಇರಲಿಲ್ಲ.

ಈಗ ಅದಕ್ಕೆ ಹಸಿವಾಗಿರಲೂ ಕಾರಣವಿಲ್ಲ. ಅದೇ ತಾನೇ ಕೊಂಚಹೊತ್ತಿನ ಮುಂಚೆ ಅದರ ದೊಡ್ಡಮ್ಮ ಹಾಲನ್ನ, ತುಪ್ಪದನ್ನ ತಿನ್ನಿಸಿ ಸುತ್ತುಗೆಲಸಕ್ಕೆ ದುಡಿಯಲು ಅದೆತ್ತಲೊ ಹೋಗಿದ್ದಳು.

ಜಾನಕಿಗೆ ಅದರ ಅಳುವೇಕೆ ಎಂದೇ ಅರಿವಾಗಲಿಲ್ಲ. ಆದರೆ ಮಗು ಅಳುವುದು



**'ಮಯೂರ' ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1975ರ ಸೆಪ್ಟೆಂಬರ್ ತಿಂಗಳ ಸಂಚಿಕೆಯಿಂದ ಆಯ್ದ ಬರಹ.**